# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಗೋವಿಂದ ರಾಜು**
**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 088**
**ಉತ್ತರಿಸಬೇಕಾದ ದಿನಾಂಕ : 15.02.2022**
**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಪತ್ತಿನ ಸಂಘಗಳನ್ನು ಪ್ರಾರಂಭಿಸಲು ಇರುವ ಮಾನದಂಡವೇನು; | ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ನಿಯಮ 3, 3ಎ, 3ಬಿ ನಲ್ಲಿ ಸ್ಪಷ್ಟಪಡಿಸಲಾಗಿದೆ. ಪ್ರಾರಂಭಿಕ ಷೇರು ಬಂಡವಾಳ ಹಾಗೂ ಸದಸ್ಯರ ಸೇರ್ಪಡೆ ಬಗ್ಗೆ ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಸಂಖ್ಯೆ ಆರ್‌ಎಸ್‌ಆರ್/231/ ಎಕ್ಸ್‌ಎಂಸಿ/2008-09 ದಿನಾಂಕ 17-05-2008 ರಲ್ಲಿ ನಿಗದಿಪಡಿಸಲಾಗಿದೆ. (ಅನುಬಂಧ-1). ಸದರಿ ಸುತ್ತೋಲೆ ಪ್ರಕಾರ ಸಂಗ್ರಹಿಸಬೇಕಾದ ಷೇರು ಹಣ ಹಾಗೂ ಸದಸ್ಯತ್ವ ಸೇರ್ಪಡೆ ಈ ಕೆಳಕಂಡಂತಿದೆ. |

| ಕ್ರ. ಸಂ. | ಸಹಕಾರಿಯ ಕಾರ್ಯವ್ಯಾಪ್ತಿಯ ಜನ ಸಂಖ್ಯೆ | ಕನಿಷ್ಟ ಸದಸ್ಯರು | ಪ್ರಾರಂಭಿಕವಾಗಿ ಷೇರು ಧನ ಸಂಗ್ರಹಿಸಬೇಕಾದ ಮೊತ್ತ |
|---|---|---|---|
| 1 | 2 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ | 200 | ರೂ. 4.00 ಲಕ್ಷ |
| 2 | 2 ಲಕ್ಷದ ಮೇಲ್ಪಟ್ಟು, 5 ಲಕ್ಷದವರೆಗೆ | 300 | ರೂ.6.00 ಲಕ್ಷ |
| 3 | 5.00 ಲಕ್ಷದ ಮೇಲ್ಪಟ್ಟು, 10 ಲಕ್ಷದವರೆಗೆ | 500 | ರೂ.10.00 ಲಕ್ಷ |
| 4 | 10.00 ಲಕ್ಷದ ಮೇಲ್ಪಟ್ಟು 20 ಲಕ್ಷದವರೆಗೆ | 750 | ರೂ.15.00 ಲಕ್ಷ |
| 5 | 20 ಲಕ್ಷಕ್ಕೆ ಮೇಲ್ಪಟ್ಟು | 1000 | ರೂ.20.00 ಲಕ್ಷ |

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಸಂದರ್ಭದಲ್ಲಿ ನಿಬಂಧಕರ ಸುತ್ತೋಲೆ ಸಂಖ್ಯೆ ಸಿಆರ್‌ಡಿ/ಕೆಎಂಸಿ-04/179/2016-17, ದಿನಾಂಕ:12-05-2017

# ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.

ಸಂಖ್ಯೆ: ಆರ್‌ಎಸ್‌ಆರ್/23//ಎಕ್ಸ್‌ಎಂಸಿ/2008-09. ದಿನಾಂಕ: 17 -5-2008.

## ಸುತ್ತೋಲೆ

ವಿಷಯ:- ಪಟ್ಟಣ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಬಗ್ಗೆ.

ಉಲ್ಲೇಖ:- ಸರ್ಕಾರದ ಪತ್ರ ಸಂ.ಸಿಒ/02/ಸಿಹೆಚ್‌ಎಸ್/2008, ದಿ: 9-1-2008.

--

ರಾಜ್ಯದಲ್ಲಿ ಪಟ್ಟಣ ಸಹಕಾರಿ ಪತ್ತಿನ ಸಂಘಗಳನ್ನು ನೋಂದಣಿ ಮಾಡುವಾಗ ಏಕರೂಪದ ಬೈಲಾಗಳನ್ನು ಅನುಸರಿಸುವುದು ಸೂಕ್ತವೆಂಬ ತೀರ್ಮಾನಕ್ಕೆ ಬರಲಾಗಿದೆ. ಕೆಲವೊಂದು ಪಟ್ಟಣ ಸಹಕಾರಿ ಪತ್ತಿನ ಸಂಘಗಳು ತಮ್ಮ ಸಂಘದ ಉದ್ದೇಶಗಳಲ್ಲಿ ಭಾರತೀಯ ರಿಜರ್ವ್ ಬ್ಯಾಂಕಿನ ಪರವಾನಗಿ ಪಡೆದಿರುವ ಪಟ್ಟಣ ಬ್ಯಾಂಕುಗಳು ಮಾಡುತ್ತಿರುವ ವ್ಯವಹಾರಗಳನ್ನು ನಿರ್ಬಂಧಿಸುವುದನ್ನು ಅವಶ್ಯಕವೆಂದು ಪರಿಗಣಿಸಲಾಗಿದೆ.

ಸಹಕಾರ ಕಾಯ್ದೆಯಲ್ಲಿ ಶಾಸನಬದ್ಧವಾಗಿ ಸಹಕಾರ ಸಂಘಗಳು ಅನುಸರಿಸಬೇಕಾದ ನಿಯಮಾವಳಿಗಳನ್ನು ಉಪನಿಯಮಗಳಲ್ಲಿ ಒಟ್ಟಾರೆಯಾಗಿ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಮಾದರಿ ಉಪನಿಯಮಗಳನ್ನು ರಚಿಸಲಾಗಿರುತ್ತದೆ.

ರಾಜ್ಯದಲ್ಲಿನ ಸಹಕಾರ ಇಲಾಖೆಯ ವಿವಿಧ ಮಟ್ಟದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸಂಘಗಳನ್ನು ನೋಂದಣಿ ಮಾಡುವಾಗ ಮಾದರಿ ಉಪನಿಯಮಗಳಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಘಗಳ ಉಪನಿಯಮಗಳನ್ನು ನೋಂದಣಿ ಮಾಡಲು ಹಾಗೂ ಉಪನಿಯಮಗಳ ತಿದ್ದುಪಡಿ ಮಾಡಲು ಈ ಮೂಲಕ ತಿಳಿಸಲಾಗಿದೆ.

ಪಟ್ಟಣ ಸಹಕಾರಿ ಪತ್ತಿನ ಸಂಘಗಳ ಕಾರ್ಯವ್ಯಾಪ್ತಿಗಳು ಸಾಧ್ಯವಾದಷ್ಟು ಮಟ್ಟಿಗೆ ಆಯಾ ಪಟ್ಟಣದ ಕೆಲವು ಆಯ್ದ ಪಟ್ಟಣ/ನಗರಗಳ ಆಯ್ದ ಭಾಗಗಳಿಗೆ ಮಾತ್ರ ಸೀಮಿತಗೊಳಿಸಿದಲ್ಲಿ ಸಂಘದ ಸದಸ್ಯರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವುದಲ್ಲದೆ, ಸಂಘಗಳ ವ್ಯವಹಾರವನ್ನು ಹೆಚ್ಚು ಪರಿಣಾಮಕಾರಿಯಾಗಿ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಅನುಕೂಲವಾಗುವುದು ಹಾಗೂ ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಸಹಕಾರಿ ಸಂಘಗಳಲ್ಲಿ ಸದಸ್ಯರಾಗುವುದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯವಾಗುತ್ತದೆ.

ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಪಟ್ಟಣ ಸಹಕಾರಿ ಪತ್ತಿನ ಸಂಘಗಳ ನೋಂದಣಿ ಮಾಡುವಾಗ ಇಲಾಖಾಧಿಕಾರಿಗಳು ಈ ಕೆಳಕಂಡ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

1. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 4 ರನ್ವಯ ಸಹಕಾರ ಸಂಘಗಳನ್ನು ಸದರಿ ಅಧಿನಿಯಮದಡಿ ಸೂಚಿಸಿರುವ ಷರತ್ತುಗೊಳಪಟ್ಟು ನಿಯಮಾನುಸಾರ ಆರ್ಥಿಕ ಸದೃಢತೆಯಿಂದ (economically viable) ನಡೆಯುವ ಸಾಧ್ಯತೆಯಿದೆ ಎಂಬುದನ್ನು ಹಾಗೂ ಹಾಗೆ

ಮಾಡುವುದರಿಂದ ಹಾಲಿ ಇರುವ ಸಹಕಾರ ಸಂಘಗಳ ಬೆಳವಣಿಗೆಗೆ ಯಾವುದೇ ಬಾಧಕ ಉಂಟಾಗುವುದಿಲ್ಲ ಎಂಬುದನ್ನು ಖಾತರಿಪಡಿಸಕೊಳ್ಳತಕ್ಕದ್ದು.

2. ಪಟ್ಟಣ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವ ಪೂರ್ವದಲ್ಲಿ ಷೇರು ಸಂಗ್ರಹಿಸಲು ಅನುಮತಿ ನೀಡುವ ಮೊದಲು ಸ್ಥಳೀಯ ಜನಸಂಖ್ಯೆ, ಹಾಲಿ ಇರುವ ಇಂತಹ ಸಂಘಗಳ ವಹಿವಾಟು, ಇವುಗಳನ್ನು ಪರಿಶೀಲಿಸಿದ ನಂತರ ಉದ್ದೇಶಿತ ಸಂಘವು ಆರ್ಥಿಕವಾಗಿ ಸಬಲತೆ ಹೊಂದುವುದೇ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.

3. ಈ ತರಹದ ಸಂಘಗಳ ಉಪನಿಯಮಗಳನ್ನು ನೋಂದಾಯಿಸುವಾಗ ಸದಸ್ಯೇತರರಿಂದ (ಸದಸ್ಯರಲ್ಲದವರಿಂದ) ಠೇವಣಿ ಸಂಗ್ರಹಿಸುವುದನ್ನು/ವ್ಯವಹರಿಸುವುದನ್ನು ನಿರ್ಬಂಧಿಸತಕ್ಕದ್ದು.

4. ಸಂಘಗಳ ಹೆಸರಿನಲ್ಲಾಗಲೀ/ಉದ್ದೇಶಗಳಲ್ಲಾಗಲೀ ಬ್ಯಾಂಕ್, ಬ್ಯಾಂಕರ್, ಬ್ಯಾಂಕಿಂಗ್ ಇತ್ಯಾದಿ ಶಬ್ದಗಳನ್ನು ಉಪಯೋಗಿಸತಕ್ಕದ್ದಲ್ಲ.

5. ಪಟ್ಟಣ ಸಹಕಾರಿ ಪತ್ತಿನ ಸಂಘಗಳ ಕಾರ್ಯವ್ಯಾಪ್ತಿಯನ್ನು ಆಯಾ ಪಟ್ಟಣ ಅಥವಾ ನಗರ ಪ್ರದೇಶದ ಕೆಲವು ಆಯ್ದ ಭಾಗಗಳಿಗೆ ಮಾತ್ರ ಸೀಮಿತಗೊಳಿಸತಕ್ಕದ್ದು.

6. ಪಟ್ಟಣ ಸಹಕಾರಿ ಪತ್ತಿನ ಸಂಘಗಳ ಉದ್ದೇಶಗಳನ್ನು ಬ್ಯಾಂಕಿಂಗ್ ಚಟುವಟಿಕೆಗಳಾದ ಚೆಕ್ ಉಪಯೋಗ, ಹುಂಡಿಗಳ ಹಾಗೂ ಚೆಕ್ಕುಗಳ ಸೋಡಿ ಇಂತಹ ಚಟುವಟಿಕೆಗಳನ್ನು ಸ್ಪಷ್ಟವಾಗಿ ನಿರ್ಬಂಧಿಸತಕ್ಕದ್ದು.

7. ಸಂಘಗಳಲ್ಲಿ ಒಟ್ಟು ಠೇವಣಿಯ ಕನಿಷ್ಠ 10% ನಗದು ಪರಿವರ್ತನೀಯ ಆಸ್ತಿಯನ್ನು ಹಾಗೂ ಕನಿಷ್ಟ ಶೇ.3 ರಷ್ಟು ನಗದನ್ನು ಕಾಯ್ದುಕೊಳ್ಳುವುದನ್ನು ಉಪನಿಯಮಗಳಲ್ಲಿ ಕಡ್ಡಾಯಗೊಳಿಸತಕ್ಕದ್ದು.

8. ಪಟ್ಟಣ ಪತ್ತಿನ ಸಹಕಾರ ಸಂಘಗಳು ತಮ್ಮ ಠೇವಣಿಗಳ ಮೇಲಿನ ಬಡ್ಡಿ ವೆಚ್ಚ ಹಾಗೂ ಸಾಲಗಳ ಮೇಲೆ ವಿಧಿಸುವ ಬಡ್ಡಿ ವೆಚ್ಚಕ್ಕೆ ಶೇ.3 ಕ್ಕಿಂತ ಹೆಚ್ಚಿನ ವ್ಯತ್ಯಾಸವಿಲ್ಲದಂತೆ ಅಂತರವನ್ನು ಕಾಯ್ದುಕೊಳ್ಳುವುದು.

9. ಸಂಘದಲ್ಲಿರುವ ಸದಸ್ಯರ ಒಟ್ಟು ಸದಸ್ಯರ ಸಂಖ್ಯೆಯ ಶೇ.20 ಕ್ಕೆ ಮೀರದಂತೆ ಸಹ ಸದಸ್ಯರನ್ನು ಸೇರಿಸಿಕೊಳ್ಳಲು ನಿರ್ಬಂಧವಿರತಕ್ಕದ್ದು.

10. ಪಟ್ಟಣ ಪತ್ತಿನ ಸಹಕಾರ ಸಂಘಗಳಲ್ಲಿ ನಾಮಮಾತ್ರ ಸದಸ್ಯರಿಗೆ ಯಾವುದೇ ಸಾಲ ನೀಡದಂತೆ ನಿರ್ಬಂಧಿಸತಕ್ಕದ್ದು ಹಾಗೂ ನಾಮಮಾತ್ರ ಸದಸ್ಯರನ್ನು ಕೇವಲ ಜಾಮೀನು ನೀಡಿಕೆಗೆ ಹಾಗೂ ಸಹಕಾರ ಸಂಘಗಳ ಕಾಯ್ದೆಯ ಕಲಂ 70 ರ ವ್ಯಾಪ್ತಿಗೆ ಒಳಪಡಿಸುವ ಉದ್ದೇಶಗಳಿಗೆ ಮಾತ್ರ ಸೇರಿಸಿಕೊಳ್ಳತಕ್ಕದ್ದು.

11. ಪಟ್ಟಣ ಪತ್ತಿನ ಸಹಕಾರ ಸಂಘಗಳ ನೋಂದಣಿ ಆದರೆ ಮಾಡುವಾಗ ಆರ್ಥಿಕ ಸಬಲತೆಯನ್ನು ಖಚಿತಪಡಿಸಿಕೊಳ್ಳಲು ಸಂಗ್ರಹಿಸಬೇಕಾದ ಕನಿಷ್ಟ ಷೇರು ಹಣದ ಮಿತಿಯನ್ನು ಈ ಕೆಳಗಿನಂತೆ ಪುನ: ಪರಿಷ್ಕರಿಸಲಾಗಿದೆ.

| ಕ್ರ. ಸಂ. | ಸಹಕಾರಿಯ ಕಾರ್ಯ ವ್ಯಾಪ್ತಿಯ ಜನಸಂಖ್ಯೆ | ಕನಿಷ್ಟ ಸದಸ್ಯರು | ಪ್ರಾರಂಭಿಕವಾಗಿ ಷೇರು ಧನ ಸಂಗ್ರಹಿಸಬೇಕಾದ ಮೊತ್ತ. |
|---|---|---|---|
| 1 | 2 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ | 200 | ರೂ.4.00 ಲಕ್ಷ |
| 2 | 2 ಲಕ್ಷದ ಮೇಲ್ಪಟ್ಟು, 5 ಲಕ್ಷದವರೆಗೆ | 300 | ರೂ.6.00 ಲಕ್ಷ |
| 3 | 5.00 ಲಕ್ಷದ ಮೇಲ್ಪಟ್ಟು, 10 ಲಕ್ಷದವರೆಗೆ | 500 | ರೂ.10.00 ಲಕ್ಷ |
| 4 | 10.00 ಲಕ್ಷದ ಮೇಲ್ಪಟ್ಟು 20 ಲಕ್ಷದವರೆಗೆ | 750 | ರೂ.15.00 ಲಕ್ಷ |
| 5 | 20 ಲಕ್ಷಕ್ಕೆ ಮೇಲ್ಪಟ್ಟು | 1000 | ರೂ.20.00 ಲಕ್ಷ |

ಮಹಿಳೆಯರು, ಪ.ಜಾ./ಪ.ಪಂಗಡ/ಮತ್ತು ಅಲ್ಪ ಸಂಖ್ಯಾತರರು ಸೂಚಿಸುವ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ ಮೇಲೆ 11 ರಲ್ಲಿ ನಮೂದಿಸಿರುವ ಸದಸ್ಯರ ಹಾಗೂ ಸಂಗ್ರಹಿಸಬೇಕಾದ ಷೇರು ಹಣದ ಶೇಕಡಾ 50 ರಷ್ಟು ಗುರಿ ನಿಗಧಿಪಡಿಸತಕ್ಕದ್ದು.

ಈ ಪರಿಷ್ಕರಣೆ ಹೊರತುಪಡಿಸಿ ಉಲ್ಲೇಖದ ಸುತ್ತೋಲೆಗಳ ಪ್ರಕಾರ ಇನ್ನುಳಿದ ಮಾರ್ಗಸೂಚಿಗಳು ಜಾರಿಯಲ್ಲಿರುತ್ತವೆ.

12. ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ಸಹಕಾರ ಸಂಘಗಳ ಅಧಿನಿಯಮ ಪ್ರಕರಣ 7 ರನ್ವಯ ನೋಂದಣಿ ಮಾಡುವ ಅಧಿಕಾರ ಹೊಂದಿದ ಸಕ್ಷಮ ಪ್ರಾಧಿಕಾರ ಅಂದರೆ ಉಪ ವಿಭಾಗೀಯ ಸಹಾಯಕ ನಿಬಂಧಕರು/ಜಿಲ್ಲಾ ಉಪನಿಬಂಧಕರು/ಪ್ರಾಂತೀಯ ಜಂಟಿ ನಿಬಂಧಕರು ಹಾಗೂ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ), ಕೇಂದ್ರ ಕಛೇರಿ ರವರು ಈ ಮಾರ್ಗಸೂಚಿಗಳನ್ನು ಅನುಸರಿಸಿದ ನಂತರವೇ ನೋಂದಾಯಿಸತಕ್ಕದ್ದು. ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಯಾವುದೇ ಪತ್ತಿನ ಸಹಕಾರ ಸಂಘ ನೋಂದಾಯಿಸಿದಲ್ಲಿ ಆಯಾ ಅಧಿಕಾರಿಗಳು ಜವಾಬ್ದಾರರಾಗುತ್ತಾರೆ.

13. ಪೋಟ ನಿಯಮಗಳು ಸ್ಪಷ್ಟವಾದ ಅರ್ಥವನ್ನು ಕೊಡುತ್ತಿರಬೇಕು. ಠೇವಣಿ ಹಾಗೂ ನಿಧಿಗಳನ್ನು ಇತರೆ ಮೂಲಗಳಿಂದ, ಇತರರಿಂದಾ ಹಾಗೂ ಸದಸ್ಯೇತರರಿಂದಾ ಎಂಬ ಶಬ್ದಗಳು ಪೋಟ ನಿಯಮಗಳಲ್ಲಿರಬಾರದು.

14. ಇತರೆ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವವರು ನೋಂದಣಿ ಮಾಡುವ ಪತ್ತಿನ ಸಂಘದ ಸದಸ್ಯತ್ವಕ್ಕೆ ಅರ್ಹರಲ್ಲವೆಂಬುದನ್ನು ಉಪನಿಯಮಗಳಲ್ಲಿ ಅಳವಡಿಸಿರಬೇಕು.

15. ವ್ಯಕ್ತಿಗಳು ಮಾತ್ರ ಸಂಘದ ಸದಸ್ಯತ್ವಕ್ಕೆ ಅರ್ಹರು, ಯಾವುದೇ ಸಂಸ್ಥೆ, ನೋಂದಣಿಯಾದ ಇತರೆ ಸಂಘಗಳು, ಅಸೋಸಿಯೇಷನ್‌ಗಳು ಸಂಘದ ಸದಸ್ಯತ್ವಕ್ಕೆ ಅರ್ಹರಲ್ಲಾ.

16. ಈ ಸುತ್ತೋಲೆಯೊಂದಿಗೆ ಅನುಮೋದಿತವಾದ ಮಾದರಿ ಉಪನಿಯಮಗಳನ್ನು ಅನುಸರಿಸಿಕೊಂಡು ರಚಿಸಲಾದ ಸಂಘಗಳ ಉಪನಿಯಮಗಳನ್ನು ನೊಂದಾಯಿಸಲು ಕ್ರಮವಿಡತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

17/5

ಗೆ,

1. ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ.
2. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ.
3. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ.
4. ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳಿಗೆ- ಸೂಕ್ತ ಕ್ರಮಕ್ಕಾಗಿ.

<u>**ಪ್ರತಿಯನ್ನು:-**</u>

1. ಗೌರವಪೂರ್ವಕವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಂ.132, 1ನೇ ಮಹಡಿ, ಕೆ.ಹೆಚ್.ರಸ್ತೆ, ಬೆಂಗಳೂರು-27.
4. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ನಂ.1718, 9ನೇ ಮುಖ್ಯರಸ್ತೆ, 3ನೇ ಬಡಾವಣೆ, ಜಯನಗರ, ಬೆಂಗಳೂರು-560 011.
5. ಆಯುಕ್ತರು, ಕೈಮಗ್ಗ ಮತ್ತು ಜವಳಿ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
6. ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರು, ಕ್ರೆಸೆಂಟ್ ರಸ್ತೆ, ಬೆಂಗಳೂರು.
7. ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ನಂ.32, ಜಯನಿವಾಸ, ಶಂಕರಮಠ ರಸ್ತೆ, ಬೆಂಗಳೂರು.

ಯ:
17/5

